ಸಿ.ಸಿ .ನಂ. 231/2023 ಪಿಡಬ್ಲೂಃ 1

ದಿನಾಂಕಃ 15-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಜೆ ಎನ್ ವಕೀಲರಿಂದಃ**

3. ಸಯ್ಯದ್ ಹುಸೇನ್ ನನಗೆ ಪರಿಚಯ ಇಲ್ಲ . ಹಸನ್ ಸಾಬ್ ನನಗೆ ಪರಿಚಯ ಇಲ್ಲ. ವೇದಾವತಿಯವರ ನನಗೆ ಪರಿಚಯ. ಅವರು ಪಕ್ಕದ ಮನೆಯವರು . ವೇದಾವತಿಯವರು ಏನು ಉದ್ಯೋಗ ಮಾಡುತಾರೆ ಗೊತ್ತಿಲ್ಲ, ಅವರ ಮನೆಯವರು ಏನು ಉದೊಪ್ಯಾಗ ಮಾಡುತ್ತಾರೆ ಗೊತ್ತಿಲ್ಲ. ನಾನು ಹಣವನ್ನು ಕೊಟ್ಟಿದ್ದೆ ಎಂದು ಹೇಳುವ ಹಣವನ್ನು ಸಾಗರದಲ್ಲಿ ಕೊಟ್ಟಿದ್ದೆ . ಆರೋಪಿ ಕೊಟ್ಟಿದ್ದಾರೆ ಎಂದು ಹೇಳುವ ಚೆಕ್ ನ್ನು ಸಾಗರದಲ್ಲೇ ಕೊಟ್ಟಿದ್ದರು . ಅವರ ಮನೆಯವರ ಹತ್ತಿರ ಹೊಗಿ ದುಡ್ಡು ಕೇಳಿದಾಗ ಸಹಿ ಎಲ್ಲಾ ಮಾಡಿ ಚೆಕ್ ನ್ನು ಕೊಟ್ಟರು . ಆ ಸಮಯದಲ್ಲಿ ಸಾಕ್ಷಿದಾರರು ಯಾರು ಇರಲಿಲ್ಲ. ನಾನು ಸಾಲದ ಹಣವನ್ನು ಯಾವುದಾದರೂ ರೂಪದಲ್ಲಿ ಕೊಡಿ ಎಂದು ಹೇಳಿದ್ದೆ. ಸಾಗರದದಲ್ಲಿ ಅಬೀದಾ ಬೇಗಮ್ ಎನ್ನುವ ವ್ಯಕ್ತಿಯೇ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರು ಮಹಿಳೆ ಎಂದು ನುಡಿದಿರುತ್ತಾರೆ . ಆ ವ್ಯಕ್ತಿಯೇ ಇಲ್ಲವಾದ್ದರಿಂದ ಅವರು ನನ್ನ ಬಳಿ ಹಣ ಕೇಳುವುದಾಗಲೀ ನಾನು ಅವರಿಗೆ ಹಣ ಕೊಡುವ ಪ್ರಮೇಯವೇ ಬರುವುದಿಲ ಎಂದರೆ ಸಾಕ್ಷಿ ಅವರು ಇದ್ದರು , ಹಣ ತೆಗೆದುಕೊಂಡಿದ್ದಾರೆ ಹಾಗೂ ಚೆಕ್ ನ್ನು ಕೊಟ್ಟಿದ್ದಾರೆ ಎಂದು ನುಡಿದಿರುತ್ತಾರೆ . ಚೆಕ್ ನಿಪಿ-1 ಹಾಗೂ ಎಡಿ ಕಾರ್ಡ ನಿಪಿ -5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ ಎಂದರೆ ಗೊತ್ತಿಲ್ಲ. ಚೆಕ್ ನಲ್ಲಿರುವ ಬರವಣಿಗೆ ಇಂಗ್ಲೀಷನಲ್ಲಿದೆ ಎಂದರೆ ಸರಿ . ಅದನ್ನು ಯಾರು ಯಾವಾಗ ಬರೆದಿದ್ದಾರೆ ಗೊತ್ತಿಲ್ಲ. ನನಗೆ ಚೆಕ್ ನ್ನು ಕೊಡುವಾಗ ದಿನಾಂಕ ಹಾಗೂ ಬರವಣಿಗೆಯನ್ನು ಮಾಡಲಾಗಿತ್ತು. ನನ್ನ ಮುಂದೆ ಸಹಿ ಹಾಕಿ ಚೆಕ್ ನ್ನು ಕೊಟ್ಟರು . ಚೆಕ್ ನಲ್ಲಿರುವ ಬರವಣಿಗೆ ಹಾಗೂ ಅಬೀದಾಬಿ ಎಂದು ಬರೆದಿರುವ ಬರವಣಿಗೆಯಲ್ಲಿ ತುಂಬಾ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ನನಗೆ ಬರವಣಿಗೆ ಮಾಡಿರುವ ಚೆಕ್

ಕೊಟ್ಟಿರುತ್ತಾರೆ ಹಾಗೂ ನನ್ನ ಮುಂದೆ ಸಹಿ ಮಾಡಿ ಚೆಕ್ ನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ಚೆಕ್ ನಲ್ಲಿರುವ ಬರವಣಿಗೆ ಬರೆದಿರುವ ಪೆನ್ ಇಂಕ್ ಹಾಗೂ ಸಹಿ ಮಾಡಿರುವ ಇಂಕ್ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ ಯಾರು ಓದು ಬರಹ ಕಲಿತವರು ಇಲ್ಲ ಎಂದರೆ ಗೊತ್ತಿಲ್ಲ. ಬ್ಯಾಂಕ್ ನವರು ಚೆಕ್ ನ್ನು ಕೊಡುವಾಗ ಅದು ಯಾರಿಗೆ ಸಂಬಂಧಪಟ್ಟ ಚೆಕ್ ಇರುತ್ತದೆ ಅವರ ಹೆಸರು ಇರುತ್ತದೆ ಎಂದರೆ ಸಾಕ್ಷಿ ಅದು ಬ್ಯಾಂಕನ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ .

4. ನಾನು ಕಷ್ಟಪಟ್ಟು ದುಡಿದಿರುವ ಹಣ ಹೋಗುತ್ತದೆ ಎಂದು ನಾನು ನ್ಯಾಯಾಲಯಕ್ಕೆ ಕಷ್ಟಪಟ್ಟು ಓಡಾಡುತ್ತಿದ್ದೇನೆ. ಸಾಗರದಲ್ಲಿ ಪ್ರಕರಣವನ್ನು ದಾಖಲಿಸಲು ಕೊಟ್ಟಿದ್ದೆ , ಆ ವಕೀಲರು ಇಲ್ಲೇ ದಾಖಲಿಸಬೇಕೆಂದು ಹೇಳಿದರು. ಶ್ರೀ ಸಂತೋಷ ಎಂಬ ವಕೀಲರು ಪ್ರಕರಣವನ್ನು ಇಲ್ಲಿ ದಾಖಲಿಸಲು ಹೇಳಿದರು. ನೋಟಿಸನ್ನು ಸಂತೋಷ ವಕೀಲರೇ ಸಾಗರದಿಂದ ಕೊಟ್ಟಿರುತ್ತಾರೆ . ನೋಟಿಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ-5 ಎಡಿ ಕಾರ್ಡನಲ್ಲಿ ಅಬೀದಾಬೇಗಮ್ ಎಂದು ಬೆರದಿರುವ ಸಹಿಗೂ ನಿಪಿ-1 ರಲ್ಲಿರುವ ಅಬೀದಾ ಬೇಗಮ್ ಎಂದು ಬರೆದಿರುವಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ . ಅಬೀದಾ ಬೇಗಮ್ ಎಂದು ನಾವು ಕೃತಕವಾಗಿ ಬರೆದು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಅಬೀದಾ ಬೇಗಮ್ ಗಂಡನ ಹೆಸರು ಮುನವರ್ ಅಲ್ಲ ಎಂದರೆ ಸರಿಯಲ್ಲ . ಅದೇ ರೀತಿ ಅಬೀದಾ ಬೇಗಮ್ ರವರ ತಂದೆಯ ಹೆಸರು ಕೂಡ ಮುನವರ್ ಅಲ್ಲ ಎಂದರೆ ಗೊತ್ತಿಲ್ಲ . ಅವರೇ ಆ ರೀತಿ ಹೇಳಿರುತ್ತಾರೆ . ಆರೊಪಿಯ ಯಾವುದೇ ದಾಖಲಾತಿ ಅಬೀದಾ ಬೇಗಮ್ ಮುನವರ್ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಚೆಕ್ ಕೂಡ ಈ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ . ಚೆಕ್ ಸಹಿತ ಈ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಪೋಲಿಸರ ಸಹಾಯದಿಂದ ಈ ಪ್ರಕರಣದಲ್ಲಿ ಅಬೀದಾ ಬೇಗಮ್ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ . ನನ್ನ ಪ್ರಭಾವದ ಮೇರೆಗೆ ಪೋಲಿಸರು ಆರೋಪಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೆ

ಸಂಬಂಧಿಸಿದಂತೆ ನಾನು ಹೇಳುವಂತೆ ವ್ಯವಹಾರ ಈ ನ್ಯಾಯಾಲಯದ ಸರಹದ್ದಿನಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಾನು ಆಗ ಇಲ್ಲೇ ವಾಸವಿದ್ದೆ ಹಾಗೂ ಚೆಕ್ ನ್ನು ಇಲ್ಲೇ ಹಾಜರು ಪಡಿಸಿರುತ್ತೇನೆ , ಕಾರಣ ವ್ಯವಹಾರ ಇಲ್ಲಿ ನಡೆದಿದೆ ಎಂದು ನುಡಿದಿರುತ್ತಾರೆ . ಓಡಾಡಲು ತೊಂದರೆ ಆಗುತ್ತದೆ ಎಂದು ಈಗ ನನ್ನ ಎಸ್ ಬಿ ಖಾತೆಯನ್ನು ಸಾಗರ ಬ್ಯಾಂಕಿಗೆ ವರ್ಗಾಯಿಸಿಕೊಂಡಿರುತ್ತೇನೆ . ವರ್ಗಾಯಿಸಿಕೊಂಡ ದಿನಾಂಕ ನೆನಪಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಆರೋಪಿಯ ಗಂಡನ ಹೆಸರು ಸಯ್ಯದ್ ಹುಸೇನ್ ಎಂದರೆ ಗೊತ್ತಿಲ್ಲ . ಆರೋಪಿಯ ತಂದೆಯ ಹೆಸರು ಹಸನ್ ಸಾಬ್ ಎಂದರೆ ಗೊತ್ತಿಲ್ಲ. ಆರೋಪಿಯ ಎಲ್ಲಾ ದಾಖಲಾತಿಗಳು ಈ ಎರಡು ಹೆಸರಿನಲ್ಲಿವೆ ,ಬೇರೆ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಖಾತೆ ಕೂಡ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಾನು ಯಾರದ್ದೋ ಚೆಕ್ ನ್ನು ಪಡೆದುಕೊಂಡು ಆರೋಪಿಯ ವಿರುದ್ಧ ಸುಳ್ಳು ಫಿರ್ಯಾದು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಈ ಪ್ರಕರಣವನ್ನು ವಿಚಾರಣೆ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಸಮ್ಮತ ವಸೂಲು ಮಾಡತಕ್ಕಂತಹ ಯಾವುದೇ ಹಣ ಅಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ಕೊಡದೇ ಇದುದ್ದರಿಂದ ಅವರು ಹಣವನ್ನು ಮರಳಿ ಕೊಡುವ ಯಾವುದೇ ಜವಾಬ್ದಾರಿ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳಿದ ವಿಳಾಸದಲ್ಲಿ ಆರೋಪಿ ಇರುವುದಿಲ್ಲ ಹಾಗೂ ಅವರಿಗೆ ಯಾವುದೇ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ . ಈ ಚೆಕ್ ನ್ನು ಕೂಡ ಆರೋಪಿ ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 5 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-5 ರಂತೆ ಯಾವುದೇ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ . ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಪಿಡಬ್ಲೂಃ 1

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.